DECEMBER 20, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು:**

**ಬೆಳಗಾವಿಯ ಚಳಿಗಾಲದ ವಿಧಾನ ಮಂಡಲ** ಅಧಿವೇಶನ; 10 ದಿನಗಳ ಕಲಾಪದ ಬಳಿಕ, ಅನಿರ್ದಿಷ್ಟಾವಧಿಗೆ ಮುಂದೂಡಿಕೆ.

**ಕಿತ್ತೂರು ಕರ್ನಾಟಕ ಅಭಿವೃದ್ಧಿ ಮಂಡಳಿ ಸ್ಥಾಪನೆಗೆ,** ಉತ್ತರ ಕರ್ನಾಟಕ ಭಾಗದ ಶಾಸಕರಿಂದ, ಮುಖ್ಯಮಂತ್ರಿಯವರಿಗೆ ಮನವಿ.

**ಚಿಕ್ಕಮಗಳೂರು ಜಿಲ್ಲೆ, ಬಾಳೆಹೊನ್ನೂರಿನ** ಕಾಫಿ ಸಂಶೋಧನಾ ಸಂಸ್ಥೆಗೆ, ಶತಮಾನೋತ್ಸವ ಸಂಭ್ರಮ.

**ಕೇಂದ್ರ ಹಣಕಾಸು ಖಾತೆ ಸಚಿವರಾದ** ನಿರ್ಮಲಾ ಸೀತಾರಾಮನ್, ಇಂದು ಮತ್ತು ನಾಳೆ, ವಿಜಯನಗರಕ್ಕೆ ಭೇಟಿ.

**ಐದು ವರ್ಷದೊಳಗಿನ ಮಕ್ಕಳಿಗೆ,** ಪಲ್ಸ್ ಪೋಲಿಯೋ ಹನಿ ನೀಡಿಕೆ ಅಭಿಯಾನಕ್ಕೆ, ನಾಳೆ ಚಾಲನೆ.

<><><>

**ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ಸಮಾವೇಶಗೊಂಡ,** ಚಳಿಗಾಲದ ಅಧಿವೇಶನ 10 ದಿನಗಳ ಕಲಾಪ ಪೂರ್ಣಗೊಂಡ ಬಳಿಕ, ನಿನ್ನೆ, ಅನಿರ್ದಿಷ್ಟಾವಧಿಗೆ ಮುಂದೂಡಲ್ಪಟ್ಟಿತು. ಮುಖ್ಯಮಂತ್ರಿ ಸಿದ್ದರಾಮಯ್ಯ ವಿಧಾನಸಭೆಯಲ್ಲಿ, ಉತ್ತರ ಕರ್ನಾಟಕ ಭಾಗದ ಅಭಿವೃದ್ಧಿ ಕುರಿತು ನಡೆದ ಚರ್ಚೆಯಲ್ಲಿ ಪಾಲ್ಗೊಂಡು, ಮಾತನಾಡಿ, ಶಿಕ್ಷಣ ಕ್ಷೇತ್ರದ ಅಭಿವೃದ್ಧಿಗಾಗಿ, ಛಾಯಾ ದೇವಣಗಾಂವಕರ ಸಮಿತಿ ವರದಿ, ಈ ತಿಂಗಳ 16ರಂದು ಸಲ್ಲಿಕೆಯಾಗಿದೆ. ಸಮಿತಿ ಶಿಫಾರಸಿನಂತೆ, ಶಿಕ್ಷಣ ಕ್ಷೇತ್ರದ ಶೇಕಡ 80 ರಷ್ಟು ಹುದ್ದೆಗಳನ್ನು ಭರ್ತಿ ಮಾಡಲು ಸೂಚಿಸಲಾಗಿದೆ ಎಂದರು. ಒಟ್ಟು 900 ಕರ್ನಾಟಕ ಪಬ್ಲಿಕ್ ಶಾಲೆಗಳ ಪೈಕಿ, ನೂತನವಾಗಿ 300 ಕೆ.ಪಿ.ಎಸ್ ಶಾಲೆಗಳನ್ನು, ಕಲ್ಯಾಣ ಕರ್ನಾಟಕಕ್ಕೆ ನೀಡಲಾಗಿದೆ ಎಂದು, ಮುಖ್ಯಮಂತ್ರಿ ಹೇಳಿದರು. ಪ್ರೊಫೆಸರ್ ಡಿ.ಎಂ. ನಂಜುಂಡಪ್ಪ ಪ್ರಾದೇಶಿಕ ಅಸಮತೋಲನ ನಿವಾರಣೆ ವರದಿ ಅನುಷ್ಠಾನದ ಮೂಲಕ ಸಾಧಿಸಲಾದ, ಅಭಿವೃದ್ಧಿ ಕುರಿತಂತೆ ಮಾಹಿತಿ ಪಡೆಯಲು, ಆರ್ಥಿಕ ತಜ್ಞ, ಪ್ರೊಫೆಸರ್ ಗೋವಿಂದ ರಾವ್ ಅಧ್ಯಕ್ಷತೆಯ ಸಮಿತಿ ಕಾರ್ಯಪ್ರವೃತ್ತವಾಗಿದೆ, ಎಂದರು.

<><><>

**ಹೈದರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿ** ಮಂಡಳಿ – ಕೆ.ಕೆ.ಆರ್.ಡಿ.ಬಿ ಮೂಲಕ, ಕಲ್ಯಾಣ ಕರ್ನಾಟಕ ಭಾಗದ 7 ಜಿಲ್ಲೆಗಳ ಅಭಿವೃದ್ಧಿಗೆ, ಇದು ವರೆಗೆ, 24 ಸಾವಿರದ 778 ಕೋಟಿ ರೂಪಾಯಿ ಅನುದಾನ ನೀಡಲಾಗಿದೆ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ, ವಿಧಾನಸಭೆಗೆ ತಿಳಿಸಿದ್ದಾರೆ. ನವಲಗುಂದ ಶಾಸಕ ಎನ್.ಎಚ್. ಕೋನರೆಡ್ಡಿ, ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿ ಮಾದರಿಯಲ್ಲಿ, ಕಿತ್ತೂರು ಕರ್ನಾಟಕ ಅಭಿವೃದ್ಧಿ ಮಂಡಳಿ ಸ್ಥಾಪಿಸಿ, ಪ್ರತಿ ವರ್ಷ 5 ಸಾವಿರ ಕೋಟಿ ರೂಪಾಯಿ ಅನುದಾನ ನೀಡುವಂತೆ, ಹಲವು ಶಾಸಕರೊಂದಿಗೆ ಮುಖ್ಯಮಂತ್ರಿಯವರಿಗೆ ಸಲ್ಲಿಸಿದ ಮನವಿ ಕುರಿತು ಅವರು ಪ್ರತಿಕ್ರಿಯೆ ನೀಡಿದರು. ಪ್ರೊಫೆಸರ್ ಗೋವಿಂದರಾವ್ ಸಮಿತಿ ವರದಿ ಬಳಿಕ, ಪರಿಶೀಲಿಸಿ ತೀರ್ಮಾನಿಸುವುದಾಗಿ, ಹೇಳಿದರು.

<><><>

**ಮಹಾದಾಯಿ ನದಿ ಕುಡಿಯುವ ನೀರು ಯೋಜನೆ ಮೂಲಕ,** ಧಾರವಾಡ, ಬೆಳಗಾವಿ, ಗದಗ ಹಾಗೂ ಬಾಗಲಕೋಟೆ ಜಿಲ್ಲೆಗಳ ಜನರಿಗೆ, ಕುಡಿಯುವ ನೀರು ಒದಗಿಸುವ ಮಹತ್ವಾಕಾಂಕ್ಷೆ ಹೊಂದಲಾಗಿದೆ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ವಿಧಾನಸಭೆ ಕಲಾಪದಲ್ಲಿ ಮಾತನಾಡಿದ ಅವರು, ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದಂತೆ, 13 ದಶಾಂಶ 4–2 ಟಿ.ಎಂ.ಸಿ. ಅಡಿ ನೀರು ಹಂಚಿಕೆ ಮಾಡಲಾಗಿದೆ. ಕೇಂದ್ರ ಪರಿಸರ ಇಲಾಖೆ, ಮಹಾದಾಯಿ ನದಿ ಯೋಜನೆಗೆ ಪರವಾನಗಿ ನೀಡಬೇಕಿದೆ ಎಂದರು. ವಿಧಾನಮಂಡಲ ಅಧಿವೇಶನದ ಕೊನೆಯ ದಿನವಾದ ನಿನ್ನೆ, ವಿಧಾನ ಪರಿಷತ್ತಿನಲ್ಲಿ ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ತಿದ್ದುಪಡಿ ವಿಧೇಯಕ–2025, ಅನುಸೂಚಿತ ಜಾತಿಗಳು ಹಾಗೂ ಅನುಸೂಚಿತ ಬುಡಕಟ್ಟುಗಳ ಆಯೋಗ ವಿಧೇಯಕ ಮಸೂದೆ – 2025ಕ್ಕೆ ಅಂಗೀಕರಿಸಲ್ಪಟ್ಟವು.

<><><>

**ಮಹಾತ್ಮ ಗಾಂಧಿ, ರಾಷ್ಟ್ರೀಯ** ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆಯನ್ನು, ವಿಕಸಿತ ಭಾರತ; ಗ್ರಾಮೀಣ ರೋಜ್‌ಗಾರ್ ಮತ್ತು ಆಜೀವಿಕಾ ಮಿ ್ನ್, ವಿಕಸಿತ ಭಾರತ – ಜಿ ರಾಮ ಜಿ ಎಂದು, ಕೇಂದ್ರ ಮರು ನಾಮಕರಣ ಮಾಡಿದೆ. ಪ್ರಧಾನಮಂತ್ರಿ ಅವರ, 2047ರ ವಿಕಸಿತ ಭಾರತ ಪರಿಕಲ್ಪನೆಯೊಂದಿಗೆ, ವಿಕಸಿತ ಭಾರತ – ಜಿ ರಾಮ ಜಿ ಮಸೂದೆ, ಸಮ್ಮಿಳಿತಗೊಂಡು, ಮರು ರೂಪ ಪಡೆದಿದೆ. ಕೊಪ್ಪಳ ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ, ಟಿ. ಕೃಷ್ಣಮೂರ್ತಿ ಜಿಲ್ಲೆಯಲ್ಲಿ ಕೈಗೊಳ್ಳಲಾದ ಉದ್ಯೋಗ ಖಾತ್ರಿ ಕಾಮಗಾರಿಗಳ ಬಗ್ಗೆ, ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ.

<><><>

**ಚಿಕ್ಕಮಗಳೂರು ಜಿಲ್ಲೆ, ಬಾಳೆಹೊನ್ನೂರಿನ** ಕಾಫಿ ಸಂಶೋಧನಾ ಸಂಸ್ಥೆ ಶತಮಾನೋತ್ಸವ ಸಂಭ್ರಮದಲ್ಲಿದೆ. ಇಂದಿನಿಂದ 3 ದಿನಗಳ ಕಾಲ, ಸಂಸ್ಥೆಯ ಆವರಣದಲ್ಲಿ, ಶತಮಾನೋತ್ಸವದ ವಿಶೇಷ ಕಾರ್ಯಕ್ರಮಗಳ ಸಂಭ್ರಮ ಮನೆ ಮಾಡಿದೆ. ಬಾಳೆಹೊನ್ನೂರಿನ ಕಾಫಿ ಸಂಶೋಧನಾ ಸಂಸ್ಥೆ, ಇದು ವರೆಗೆ 16 ವಿಶಿಷ್ಟ ಸ್ವಾದವುಳ್ಳ ಕಾಫಿ ತಳಿಗಳನ್ನು ಪರಿಚಯಿಸಿದೆ. ಶತಮಾನೋತ್ಸವ ಸಂದರ್ಭದಲ್ಲಿ, ಎರಡು ಹೊಸ ಕಾಫಿ ತಳಿಗಳನ್ನು ಸಹ ಬಿಡುಗಡೆ ಮಾಡಲಾಗುತ್ತಿದೆ. ಕೇಂದ್ರ ಗ್ರಾಹಕ ವ್ಯವಹಾರಗಳ ಖಾತೆ ಸಚಿವ, ಪ್ರಲ್ಹಾದ ಜೋಶಿ, ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಚಿಕ್ಕಮಗಳೂರು, ಕೊಡಗು, ಹಾಸನ ಜಿಲ್ಲೆಗಳ ಜನಪ್ರತಿನಿಧಿಗಳು, ಕಾಫಿ ಉದ್ಯಮಿಗಳು ಹಾಗೂ ಬೆಳೆಗಾರರು, ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

<><><>

**ಭೌಗೋಳಿಕ ಮಾನ್ಯತೆ ಜಿ.ಐ. – ಟ್ಯಾಗ್ ಪಡೆದ,** ವಿಜಯಪುರ ಜಿಲ್ಲೆ, ಇಂಡಿಯ ನಿಂಬೆಹಣ್ಣನ್ನು, ಒಮಾನ್‌ಗೆ ರಫ್ತು ಮಾಡಲಾಗಿದೆ. ಕಳೆದ ಆಗಸ್ಟ್‌ನಲ್ಲಿ, ದುಬೈಗೆ ಮೂರು ಮೆಟ್ರಿಕ್ ಟನ್ 'ಇಂಡಿ ಲೆಮನ್' ಅನ್ನು ಮೊದಲ ಬಾರಿಗೆ ರಫ್ತು ಮಾಡಲಾಗಿತ್ತು. ಈಗ ಒಮಾನ್ ದೇಶಕ್ಕೆ, ರಫ್ತು ಮಾಡಲಾಗಿದೆ ಎಂದು, ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ತಿಳಿಸಿದೆ. ಯುನೈಟೆಡ್ ಕಿಂಗ್‌ಡಮ್‌ಗೆ, ಇಂಡಿ ನಿಂಬೆ ರಫ್ತು ಮಾಡಲು, 350 ಕಿಲೋ ಗ್ರಾಂಗೆ, ಜಿಐ– ಟ್ಯಾಗ್ ಮಾಡಿ, ಕಳುಹಿಸಲಾಗಿದೆ ಎಂದು ಸಚಿವಾಲಯ ತಿಳಿಸಿದೆ.

<><><>

**ಭಾರತ ಪೋಲಿಯೋ ಮುಕ್ತ ರಾಷ್ಟ್ರವಾಗಿ,** 14 ವ ್ಷಗಳು ಕಳೆದಿವೆ. ಆದರೆ, ಭಾರತದ ನೆರೆಯ ರಾಷ್ಟ್ರಗಳಲ್ಲಿ, Wild Polio Virus ಸಂಭಾವ್ಯ ಹರಡುವಿಕೆ ಹಿನ್ನೆಲೆ, ಮುಂಜಾಗ್ರತಾ ಕ್ರಮವಾಗಿ, ದೇಶಾದ್ಯಂತ ನಾಳೆಯಿಂದ 24 ರ ವರೆಗೆ, ನಾಲ್ಕು ದಿನಗಳ ಕಾಲ, ಐದು ವರ್ಷದೊಳಗಿನ ಮಕ್ಕಳಿಗೆ, ಪಲ್ಸ್ ಪೋಲಿಯೋ ಹನಿ ನೀಡಿಕೆ ಅಭಿಯಾನ, ನಡೆಯಲಿದೆ. ವಿಜಯನಗರ ಜಿಲ್ಲಾಧಿಕಾರಿ ಕವಿತಾ ಮನ್ನಿಕೇರಿ, ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮದ, ಭಿತ್ತಿಪತ್ರಗಳನ್ನು, ಜಿಲ್ಲಾಧಿಕಾರಿ ಕಚೇರಿಯಲ್ಲಿ ಬಿಡುಗಡೆಗೊಳಿಸಿದರು. ಆರೋಗ್ಯ ಇಲಾಖೆ, ವಿಜಯನಗರ ಜಿಲ್ಲೆಯಲ್ಲಿ, ಪಲ್ಸ್ ಪೋಲಿಯೋ ಅಭಿಯಾನಕ್ಕೆ ಕೈಗೊಂಡಿರುವ, ಪೂರ್ವ ಸಿದ್ಧತೆ ಕುರಿತು, ಮಾಹಿತಿ ನೀಡಿದ್ದಾರೆ, ಸಂತಾನೋತ್ಪತ್ತಿ ಮತ್ತು ಮಕ್ಕಳ ಜಿಲ್ಲಾ ಆರೋಗ್ಯ ಅಧಿಕಾರಿ ಡಾಕ್ಟರ್ ಜಂಬಯ್ಯ.

<><><>

**ಕೇಂದ್ರ ಹಣಕಾಸು ಮತ್ತು ಕಾರ್ಪೋರೇಟ್ ವ್ಯವಹಾರಗಳ ಖಾತೆ ಸಚಿವರಾದ** ನಿರ್ಮಲಾ ಸೀತಾರಾಮನ್, ಇಂದಿನಿಂದ ಎರಡು ದಿನಗಳ ಕಾಲ, ವಿಜಯನಗರ ಜಿಲ್ಲೆಗೆ ಭೇಟಿ ನೀಡಲಿದ್ದಾರೆ. ಇಂದು ಬೆಳಗ್ಗೆ 10 ಗಂಟೆಗೆ, ವಿಜಯನಗರ ಅಮರಾವತಿ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ, ವಿಜಯ ಪಥ ಯೋಜನೆಗೆ, ಅವರು ಚಾಲನೆ ನೀಡುವರು. ಇಂದು ರಾತ್ರಿ 7:30ಕ್ಕೆ ಹಂಪಿಯಲ್ಲಿ ಧ್ವನಿ ಮತ್ತು ಬೆಳಕು ಪ್ರದರ್ಶನವನ್ನು ವೀಕ್ಷಿಸುವರು. ನಾಳೆ ಬೆಳಗ್ಗೆ 10:30ಕ್ಕೆ ಕಮಲಾಪುರದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ, ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆ.

<><><>

**ಕಲ್ಯಾಣ ಕರ್ನಾಟಕದ, ಬೀದರ,** ಕಲಬುರಗಿ, ಯಾದಗಿರಿ ಹಾಗೂ ರಾಯಚೂರು ಜಿಲ್ಲೆಗಳಲ್ಲಿ, ಶೀತಗಾಳಿ ಪ್ರಖರವಾಗಿ ಬೀಸಲಿದೆ ಎಂದು, ಹವಾಮಾನ ಇಲಾಖೆ ಮುನ್ಸೂಚನೆ ನೀಡಿ, ನಾಲ್ಕು ಜಿಲ್ಲೆಗಳಿಗೆ 'ಯಲ್ಲೋ ಅಲರ್ಟ್' ಘೋಷಿಸಿದೆ. ರಾಜ್ಯಾದ್ಯಂತ, ಮುಂದಿನ ನಾಲ್ಕು ದಿನ, ಶೀತಗಾಳಿ ಬೀಸುವಿಕೆ ಮುಂದುವರಿಯಲಿದ್ದು, ಚಳಿ ಹೆಚ್ಚರಲಿದೆ ಎಂದು, ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ, ಸಾರ್ವಜನಿಕರನ್ನು ಎಚ್ಚರಿಸಿದೆ.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

**ಬೆಳಗಾವಿಯ ಚಳಿಗಾಲದ ವಿಧಾನ ಮಂಡಲ** ಅಧಿವೇಶನ; 10 ದಿನಗಳ ಕಲಾಪದ ಬಳಿಕ, ಅನಿರ್ದಿಷ್ಟಾವಧಿಗೆ ಮುಂದೂಡಿಕೆ.

**ಕಿತ್ತೂರು ಕರ್ನಾಟಕ ಅಭಿವೃದ್ಧಿ ಮಂಡಳಿ ಸ್ಥಾಪನೆಗೆ,** ಉತ್ತರ ಕರ್ನಾಟಕ ಭಾಗದ ಶಾಸಕರಿಂದ, ಮುಖ್ಯಮಂತ್ರಿಯವರಿಗೆ ಮನವಿ.

**ಚಿಕ್ಕಮಗಳೂರು ಜಿಲ್ಲೆ, ಬಾಳೆಹೊನ್ನೂರಿನ** ಕಾಫಿ ಸಂಶೋಧನಾ ಸಂಸ್ಥೆಗೆ, ಶತಮಾನೋತ್ಸವ ಸಂಭ್ರಮ.

**ಕೇಂದ್ರ ಹಣಕಾಸು ಖಾತೆ ಸಚಿವರಾದ** ನಿರ್ಮಲಾ ಸೀತಾರಾಮನ್, ಇಂದು ಮತ್ತು ನಾಳೆ, ವಿಜಯನಗರಕ್ಕೆ ಭೇಟಿ.

**ಐದು ವರ್ಷದೊಳಗಿನ ಮಕ್ಕಳಿಗೆ,** ಪಲ್ಸ್ ಪೋಲಿಯೋ ಹನಿ ನೀಡಿಕೆ ಅಭಿಯಾನಕ್ಕೆ, ನಾಳೆ ಚಾಲನೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>